'ಸ್ವಲ್ಪ ದಿನ ಕಳೀಲಿ' ಎಂದಿದ್ದೆ. ಬಹುಶಃ ನನ್ನ ಗೈರು ಅವರನ್ನು ಕಾಡುತ್ತಿರಬಹುದೇ?

ಯಾಕೆ? ನನಗೆ ಆ ಭಾವ ಬಾರದೇ ಎಂದು ಕೇಳಿದರೆ ಉತ್ತರ, 'ನಿಖರವಾಗಿ ತಿಳಿಯೆ' ಎಂದೇ ಹೇಳಬೇಕು.

★★★

ರಿಷಿಯಿಂದ ಮೆಸೇಜ್: 'ಕಲೀಗ್ಸ್ ಪಶ್ಚಿಮ ಭಾರತದ ಪ್ರವಾಸ ಯೋಜಿಸಿದ್ದಾರೆ. ವಿಶೇಷವೆಂದರೆ ಜೋಡಿಗಳು ಮಾತ್ರ ಹೋಗುವ ನಿರ್ಧಾರ, ನನಗೂ ಒತ್ತಾಯ ಮಾಡ್ತಿದ್ದಾರೆ. ನಿನಗೂ ಒಂದು ಬದಲಾವಣೆ ಇರುತ್ತೆ. ಒಂದು ಹತ್ತು ದಿನ ಲೀವ್ ಹಾಕಿ ಬಂದರೆ ಸಾಕು. ಅಮ್ಮು, ಬರ್ತೀಯಲ್ಲ? ನೀನು ಒಪ್ಪಿಗೆಕೊಟ್ಟರೆ ಸೀಟ್ ಬ್ಲಾಕ್ ಮಾಡ್ತೀನಿ.'

'ಅಮ್ಮು...' ಓದುವಾಗ ನವಿರಾದ ಭಾವ.

'ಥ್ಯಾಂಕ್ಸ್ ರಿಷಿ, ಯಾವುದಕ್ಕೂ ತಿಳಿಸ್ತೀನಿ' ಎಂದು ಉತ್ತರ ಕೊಟ್ಟಿದ್ದೆ.

'ಅದೇನು ನಿನ್ನ ಹೆಸರು ಅಮ್ಮಿಣಿ? ಹೊಸತಾಗಿದೆ?' ರಿಷಿ, ಮದುವೆ ಗೊತ್ತಾದಾಗ ಕೇಳಿದ್ದರು.

'ನನ್ನ ಮೂರನೇ ಅಕ್ಕನ ಹೆಸರು ಕಣ್ಮಣಿ, ಅದಕ್ಕೆ ಮ್ಯಾಚ್ ಆಗೋ ಹಾಗೆ ಇಟ್ಟಿದ್ದಾರೆ. ನಮ್ಮ ವಠಾರದಲ್ಲಿದ್ದ ಅಯ್ಯಂಗಾರ್ ಮಾಮಿಯೊಬ್ಬರು ಸೂಚಿಸಿದ್ದಂತೆ. ಮನೇಲಿ ಅಮ್ಮಿ ಅಂತ ಕರೀತಾರೆ, ಗುರುತಿಸಲೊಂದು ಹೆಸರು' ವಿವರಿಸಿದ್ದೆ.

'ನಾನು ಅಮ್ಮು ಅಂತ ಕರೀಲಾ?' ಎಂದಿದ್ದರು.

★★★

ಬ್ಯಾಂಕಿನಲ್ಲಿ ಮಧ್ಯಾಹ್ನದ ವಿರಾಮದಲ್ಲಿ ಗುಸುಗುಸು.

...ಬಹಳ ವರ್ಷಗಳಿಂದ ಒಂದೇ ಊರಿನಲ್ಲಿ ಇರುವವರಿಗೆ ಬೇರೆ ಊರಿಗೆ ವರ್ಗ. ಸರಿಸುಮಾರು ಲಿಸ್ಟ್ ರೆಡಿ – ಮೂರ್ನಾಲ್ಕು ವಾರಗಳಲ್ಲಿ ಹೆಡ್ ಆಫೀಸ್‌ನಿಂದ ಆದೇಶ ಹೊರಬರುತ್ತದೆ... ಎನ್ನುವ ವರೆಗೆ.

ಅಲ್ಲಿಗೆ ಶುರುವಾಯ್ತು ನನ್ನ ಆತಂಕ—ನನಗೂ ಸ್ಥಾನಪಲ್ಲಟದ ಸಾಧ್ಯತೆಯಿದೆಯೇ?

ಇಲ್ಲವೆಂದು ಹೇಳುವಂತಿಲ್ಲ, 'ನನಗಿಂತ ಸೀನಿಯರ್ಸ್ ಇರುವಾಗ ಅವರ ಅನಂತರವಷ್ಟೇ ನಮ್ಮ ಹೆಸರು ಬರಬೇಕು,' 'ಶಿಫಾರಸಿನ ಮುಂದೆ ಕೆಲವರು ಹೆಚ್ಚು ದೊಡ್ಡವರು ಅವರನ್ನು ಅಲ್ಲಾಡಿಸಲಾಗದು,' 'ತೀವ್ರ ಅರೋಗ್ಯ ಸಮಸ್ಯೆ,' 'ಇನ್ನೆರಡು ವರ್ಷ ಸರ್ವಿಸ್ ಇರುವವರು ತಪ್ಪಿಸಿಕೊಳ್ಳಬಹುದು' ಇತ್ಯಾದಿ ಇತ್ಯಾದಿ. ಹಾಗಾದಲ್ಲಿ, ಬೇರೆ ಊರು ಎಂದರೆ ಮತ್ತೆ ಹೊಸ ಸಂಸಾರ, ಒಬ್ಬಳೇ ಆದರೂ ಮನೆ ಮಾಡಬೇಕು, ಬಸ್ಸಿನಲ್ಲಿ ದೂರ ಪ್ರಯಾಣ ಮಾಡಲು ತನಗೆ ಈಗ ಸಾಧ್ಯವಿಲ್ಲದ ಮಾತು. ನೌಕರಿಯಲ್ಲಿರಬೇಕೆಂದರೆ ವರ್ಗಾವಣೆಯನ್ನು ಪಾಲಿಸಬೇಕು. ಅಲ್ಲಿನ ಪರಿಸರ ಹೇಗೋ ಏನೋ? ತಲೆ ಕೆಡತೊಡಗಿತು.

★★★

ಚಂದ್ರಿ ಕೆಲಸಕ್ಕೆ ಬಂದ ಮೇಲೆ ಸ್ವಲ್ಪ ನಿರಾಳ. ಅಂದು ಕೆಲಸ ಮುಗಿಸಿದ ಅನಂತರ, 'ಚಂದ್ರಿ, ಆ ಕಾಣೆಯಾದವರ ಬಗ್ಗೆ ಏನಾದ್ರೂ ವಿಷಯ ತಿಳೀತಾ? ಮೊನ್ನೆ ಪೇಪರ್‌ನಲ್ಲಿ ಹೀಗೆ ಒಬ್ಬರ ಜಾಹೀರಾತು ನೋಡಿದೆ, ಅದಕ್ಕೇ ನೆನಪಾಯ್ತು' ಎಂದೆ.

'ಅಯ್ಯೋ, ಕೆಲಸ ಮುಗಿದ ಮೇಲೆ ನೀವು ಕೇಳಿರದಿದ್ದರೂ ನಾನೇ ಹೇಳಬೇಕು ಅಂತಿದ್ದೆ' ಶುರು ಮಾಡಿದಳು.

ನನ್ನ ಕುತೂಹಲ ಹೆಚ್ಚಾಯಿತು.

'ದೂರು ಕೊಡಲಿಲ್ಲ, ಪೇಪರಿಗೂ ಹಾಕಲಿಲ್ಲವಂತೆ.'